ಹೂವು ಮತ್ತು ಜೇನುನೊಣ

The Flower and the Bee

ಕಥೆ ಮತ್ತು ಚಿತ್ರ : ಅಶೋಕ್ ದಾವರ್ ◆ Script and Illustrations : **Ashok Davar**

6 ರಿಂದ 8 ರ
ವಯೋಮಾನದ ಮಕ್ಕಳಿಗಾಗಿ
For Children of the
age group 6 to 8 years

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಎಂಬುದು ಪುಸ್ತಕಗಳನ್ನು ಓದುವುದನ್ನು ಪ್ರೋತ್ಸಾಹಿಸಲು ಭಾರತ ಸರಕಾರ (ಉಚ್ಚತರ ಶಿಕ್ಷಣ ವಿಭಾಗ, ಶಿಕ್ಷಣ ಸಚಿವಾಲಯ)ದ ಮೂಲಕ ವರ್ಷ 1957ರಲ್ಲಿ ಸ್ಥಾಪಿತವಾದ ಒಂದು ಸ್ವಾಯತ್ತ ಸಂಸ್ಥೆ. 'ಮಕ್ಕಳಿಗಾಗಿ ದ್ವಿಭಾಷಾ ಆವೃತ್ತಿ'ಯಲ್ಲಿ ದ್ವಿಭಾಷಾ ಸರಣಿಯ ಸ್ವರೂಪದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ನಿರ್ದೇಶನದಂತೆ ಮಕ್ಕಳಿಗೆ ಪೂರಕ ಪಠ್ಯ ಸಾಮಗ್ರಿ ಒದಗಿಸುವ ಹಾಗೂ ಮಕ್ಕಳು ಭಾರತದ ಬಹು ಭಾಷಾ ಸಂಸ್ಕೃತಿಯೊಂದಿಗೆ ಸಮರ್ಥವಾಗಿ ಹೊಂದಿಕೊಳ್ಳಬೇಕೆನ್ನುವ ಉದ್ದೇಶದಿಂದ ಈ ಪುಸ್ತಕ ಪ್ರಕಟಿಸುತ್ತಿದೆ.

ಡಿಸ್‌ಕ್ಲೈಮರ್

ಈ ಕಥೆಯನ್ನು ದ್ವಿಭಾಷಾ ಮಾಲೆಗೆ ತಕ್ಕಂತೆ ಸೂಕ್ತವಾಗಿ ತಿದ್ದುಪಡಿ ಮಾಡಲಾಗಿದೆ.

The National Book Trust, India is an autonomous body established by the Government of India (Department of Higher Education, Ministry of Education) in the year 1957, to promote books and reading. This title has been published in Bilingual format under the series 'Bilingual Editions for Children' as per the guidelines of the New Education Policy 2020 with the objective to create supplementary reading materials for children to help them adapt suitably to the multilingual fabric of the country.

Disclaimer

The story has been suitably edited for this bilingual edition.

ISBN 978-93-5491-690-8

ಮೊದಲ ದ್ವಿಭಾಷಾ ಸಂಸ್ಕರಣ (ಕನ್ನಡ–ಇಂಗ್ಲಿಷ್) : 2022 (ಶಕ 1944)
ಮೊದಲ ಇಂಗ್ಲಿಷ್ ಸಂಸ್ಕರಣ : 1973
ಮೊದಲ ಕನ್ನಡ ಸಂಸ್ಕರಣ : 1979
ದ ಫ್ಲವರ್ ಅಂಡ್ ದ ಬೀ (ಮೂಲ ಇಂಗ್ಲಿಷ್)
ಹೂವು ಮತ್ತು ಜೇನುನೊಣ (ಕನ್ನಡ ಅನುವಾದ)
© ಅಶೋಕ ದಾವರ್ (ಮೂಲ ಇಂಗ್ಲಿಷ್)
© ಈ ದ್ವಿಭಾಷಾ ಸಂಸ್ಕರಣ: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
₹ 90.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ISBN 978-93-5491-690-8

First Bilingual Edition (Kannada-English) 2022 (*Saka* 1944)
First English Edition : 1973
First Kannada Edition : 1979
The Flower and The Bee (*Original English*)
Hoovu Mattu Jenunona (*Kannada Translation*)
© Ashok Davar (*Original English*)
© This Bilingual Edition, National Book Trust, India
₹ 90.00

Published by the Director, National Book Trust, India
Nehru Bhawan, 5, Institutional Area, Phase-II,
Vasant Kunj, New Delhi-110070.
website : www.nbtindia.gov.in

ನೆಹರೂ ಬಾಲ ಪುಸ್ತಕಾಲಯ
Nehru Bal Pustakalaya

ಹೂವು ಮತ್ತು ಜೇನುನೊಣ
The Flower and the Bee

ಕಥೆ ಮತ್ತು ಚಿತ್ರ:
ಅಶೋಕ್ ದಾವರ್

ಇಂಗ್ಲೀಷ್ ಮೂಲದಿಂದ
ಕನ್ನಡಕ್ಕೆ ಅನುವಾದ:
'ಭೈರರಾಜ'

Story and Illustrations
Ashok Davar

Translated from the
Original English into Kannada
Bhairaraja

nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
NATIONAL BOOK TRUST, INDIA

ಒಂದು ಸುಂದರವಾದ ವಿಶಾಲ ಮರವಿತ್ತು.
ಅದರ ಕೊಂಬೆಯಲ್ಲಿ ಒಂದು ಜೇನುಗೂಡು ಕಟ್ಟಿತ್ತು.

Once there was a beehive on the branch of a large beautiful tree.

ಜೇನುಗೂಡಿನ ಒಂದು ಭಾಗದಲ್ಲಿ ಮೀಠಾ
ಮತ್ತು ಮೀಠೀ ಎಂಬ ಎರಡು ಜೇನುನೊಣಗಳು
ವಾಸವಾಗಿದ್ದವು. ಅವು ಪರಸ್ಪರ ಪ್ರೀತಿಸುತ್ತಿದ್ದವು.
ತಮ್ಮ ಎಲ್ಲಾ ಸುಖವನ್ನು ಹಂಚಿಕೊಳ್ಳುತ್ತಿದ್ದವು.

In one part of the hive lived two bees, Mitha and Mithi. They loved each other and shared all their happiness.

ಪ್ರತಿದಿನ ಬೆಳಗ್ಗೆ ಅವು ಒಂದು ಪ್ರೇಮಗೀತೆಯನ್ನು
ಗುಂಯ್‌ಗುಡುತ್ತಿದ್ದವು. ಇಡೀದಿನ ಅವು ಹೂವಿಂದ
ಹೂವಿಗೆ ಹಾರುತ್ತಾ ಜೇನನ್ನು ಸಂಗ್ರಹಿಸುತ್ತಿದ್ದವು. ಸಂಜೆ
ಅವು ಜೇನುಗೂಡಿನ ಸುತ್ತ ಝೇಂಕರಿಸುತ್ತಾ ನರ್ತಿಸುತ್ತಿದ್ದವು.

Every morning, they hummed a song of love.
During the day, they flew from flower to flower
gathering honey. In the evening, they buzzed
and danced around the hive.

ಒಂದು ದಿನ ಬೆಳಗ್ಗೆ ಮೀಠಾಗೆ ಹೊರಗೆ ಹೋಗಲಾರದಷ್ಟು ದಣಿವಾಗಿತ್ತು. ಆದ್ದರಿಂದ ಜೇನನ್ನು ಸಂಗ್ರಹಿಸಲು ಮೀಠೀ ಮಾತ್ರ ಹೋಗಬೇಕಾಯಿತು. ಅದು ಮರದಿಂದ ಹೊರಟಾಗ ಗಾಳಿಯು ಜೋರಾಗಿ ಬೀಸಲಾರಂಭಿಸಿತು. ಗಾಳಿಯು ಎಷ್ಟು ಪ್ರಬಲವಾಗಿತ್ತೆಂದರೆ ಮೀಠಿಯನ್ನು ದೂರದೂರಕ್ಕೆ ಹಾರಿಸಿಕೊಂಡು ಹೋಯಿತು.

One morning, Mitha was too tired to go out. So, Mithi had to go alone to gather honey. As she was leaving the tree, a strong wind began to blow. The wind was so strong that Mithi was blown far, far away.



ಮೀಠೀ ಒಂದು ಅಪರಿಚಿತವಾದ ತೋಟವನ್ನು ತಲುಪಿತು.
ಆ ತೋಟದ ತುಂಬ ಸುಂದರವಾದ ಹೂವುಗಳು ಅರಳಿದ್ದವು.
ಅಂತಹ ಹೂವುಗಳನ್ನು ಮೀಠೀ ಹಿಂದೆ ಎಂದೂ ನೋಡಿರಲಿಲ್ಲ.
ಮೀಠೀ ತೋಟದಲ್ಲಿ ಮತ್ತೆ ಮತ್ತೆ ಸುತ್ತಾಡಿತು.

She found herself in a strange garden. The garden was full of beautiful flowers, such as Mithi had never seen before. She flew round and round.

ಅನಂತರ ಅದು ಒಂದು ದೊಡ್ಡದಾದ ಹಸಿರು ಹೂವಿನೊಳಗೆ ಇಣುಕಿ ನೋಡಿತು, "ಇದರಲ್ಲಿ ಬಹಳಷ್ಟು ಜೇನು ಇರಬೇಕು. ಒಳಗೆ ಹೋಗಿ ನೋಡೋಣ" ಎಂದು ತನಗೆ ತಾನೆ ಹೇಳಿಕೊಂಡಿತು.

Then she peeped inside a big green flower. “This must have lots of honey. Let me go in and see,” she said to herself.

ಆದರೆ, ಅದು ಒಳಗೆ ಹೋಗುತ್ತಿದ್ದಂತೆಯೇ ಆ ಹೂವು
ಥಟ್ಟನೆ ತನ್ನ ಪಕಳೆಗಳನ್ನು ಮುಚ್ಚಿಕೊಂಡಿತು.

But as soon as she went in, the flower suddenly
closed its petals.

ಒಳಗೆ ಕತ್ತಲೆ ಕವಿಯಿತು. ಮೀಠೀ ಒಳಗೆ ಸೆರೆಯಾಯಿತು.

It became dark inside and she was trapped.

ಮೀಠೀ ತನ್ನ ಎಲ್ಲ ಬಲವನ್ನು ಪ್ರಯೋಗಿಸಿ ಹೊರಗೆ
ಬರಲು ಪ್ರಯತ್ನಿಸಿತು. ಅದು ಪಕಳೆಗಳಿಗೆ ತಲೆಯಿಂದ ಹೊಡೆಯಿತು.
ಪಕಳೆಗಳನ್ನು ಕಚ್ಚಿತು. ಆದರೆ ಅದು ಹೆಚ್ಚು ಪ್ರಯತ್ನಪಟ್ಟಷ್ಟೂ ಆ ಹೂವು
ಮೀಠಿಯನ್ನು ಭದ್ರವಾಗಿ ಒತ್ತಲಾರಂಭಿಸಿತು.

Mithi tried to force her way out with all her strength. She hit the petals, she bit the petals, but the harder she tried the more the flower closed her in.

ಸ್ವಲ್ಪ ಹೊತ್ತಿನಲ್ಲೇ ಹೂವಿನ ವಿರುದ್ಧ ಹೋರಾಡುತ್ತಾ ಅದಕ್ಕೆ ಬಹಳ ದಣಿವಾಯಿತು. ಅದು ಮೀಠಾನನ್ನು ಕುರಿತು ಚಿಂತಿಸಲು ಪ್ರಾರಂಭಿಸಿತು. ಅದರ ನೆನಪಾಗುತ್ತಿದ್ದಂತೆಯೇ ಮೀಠಿಗೆ ತನ್ನ ಕಷ್ಟಗಳೆಲ್ಲ ಮರೆತುಹೋದವು. ಅವು ಎರಡೂ ಒಟ್ಟಾಗಿ ಹಾಡುತ್ತಿದ್ದ ಹಾಡನ್ನು ಗುಂಯ್‌ಗುಡಲಾರಂಭಿಸಿತು.

Soon, she was too tired to fight against the flower and she began thinking of Mitha. Thinking of him, Mithi forgot her troubles and started humming the song they both used to hum together.

ಅದು ಹಾಡನ್ನು ಗುಂಯ್‌ಗುಡಲು ಆರಂಭಿಸುತ್ತಿದ್ದ ಹಾಗೆಯೇ ಒಂದು ವಿಚಿತ್ರ ಸಂಗತಿ ನಡೆಯಿತು. ಹೂವು ಸ್ವಲ್ಪ ಕಂಪಿಸಿತು. ಅನಂತರ ಒಂದೊಂದಾಗಿ ಪಕಳೆಗಳು ಅರಳಿಕೊಳ್ಳಲು ಪ್ರಾರಂಭಿಸಿದವು. ಕೆಲವೆ ಸಮಯದಲ್ಲಿ ಮೀಠಿ ಸ್ವತಂತ್ರವಾಯಿತು. ಅದು ತನ್ನ ರೆಕ್ಕೆಗಳನ್ನು ಬಿಚ್ಚಿ ಸಂತೋಷದಿಂದ ಝೇಂಕಾರ ಮಾಡಿ ಹಾಗೆಯೇ ಹಾರಿಹೋಯಿತು.

A strange thing happened as she hummed the song. The flower shook a little and slowly, petal by petal, it began to open. Soon Mithi was free. She unfolded her wings with a buzz of joy and flew away.



ಅಶೋಕ್ ದಾವರ್ ಅವರು ಒಬ್ಬ ಕಲಾವಿದರು ಮತ್ತು ಲೇಖಕರು. ಅವರು ಒಬ್ಬ ವಾಸ್ತುಶಿಲ್ಪಿಯೂ ಹೌದು. ಅವರು ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಭೈರರಾಜ ಅವರು ನ್ಯಾಷನಲ್ ಬುಕ್ ಟ್ರಸ್ಟ್‌ನ ಬಹಳಷ್ಟು ಪುಸ್ತಕಗಳನ್ನು ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

Ashok Davar is an artist and author as well as an architect. He has many books to his credit.

'Bhairaraja' translated many books from English into Kannada for National Book Trust, India.

Lasertypeset at Ganesha SoftService, Tumakuru
and Printed at Nutech Print Services-India, Faridabad



ಮೀಠಾ ಮತ್ತು ಮೀಠೀ ಎರಡು ಜೇನುನೊಣಗಳು. ಪರಸ್ಪರ ಪ್ರೀತಿಸುತ್ತಿದ್ದವು. ಮೀಠೀ ಒಂದು ದೊಡ್ಡ ಹೂವಿನ ಒಳಗೆ ಸೆರೆಯಾದಾಗ ಏನಾಯಿತು? ಅದು ಅಲ್ಲಿಂದ ಪಾರಾಗಿ ಹೋಯಿತೆ? ಪ್ರೇಮ ಸಂದೇಶವಿರುವಂತಹ ಒಂದು ಸುಂದರ ಕಥೆ.

Mitha and Mithi are two bees who love each other. What happens when Mithi traps inside a big flower? Will she get rid of it? A beautiful story with a message of love.

nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
NATIONAL BOOK TRUST, INDIA

₹ 90.00
ISBN 9354916902
9 789354 916908
22231815